# 1

# ದೇಹ, ಪ್ರಾಣ ಮತ್ತು ಆತ್ಮ

ಮಾನವ ಜೀವಿಗಳು ಪ್ರಾಣಿಗಳಿಗಿಂತ ಭಿನ್ನವಾಗಿರುವರು ಯಾಕಂತರೆ ನಾವು ಭೂತಕಾಲದ ಮೇಲೆ ಪ್ರತಿಬಿಂಬಿಸಬಹುದು, ಅದನ್ನು ವರ್ತಮಾನಕಾಲಕ್ಕೆ ಮತ್ತು ಭವಿಷತ್ತ್‌ಕಾಲಕ್ಕೆ ಸಂಬಂಧಿಸಬಹುದು ಮತ್ತು ಮರಣಾನಂತರದ ಜೀವನದ ಸಾಧ್ಯತೆಯ ಬಗ್ಗೆ ಆಶ್ಚರ್ಯಪಡಬಹುದು, ಲಭ್ಯವಿರುವ ಮಾಹಿತಿಯನ್ನು ಒಂದಾಗಿ ಕೂಡಿಸುವದರಿಂದ, ಜೀವನಕ್ಕೆ ಉದ್ದೇಶವಿದೆ ಮತ್ತು ಈ ಜೀವನ ತೀರಿಹೋದ ನಂತರ ನಮಗಾಗಿ ಒಂದು ರೀತಿಯ ಅಸ್ತಿತ್ವವು ಕಾದುಕೊಂಡಿದೆ ಎಂದು ನಾವು ಒಪ್ಪಿಕೊಳ್ಳಬಹುದು.

## ನಮ್ಮ ಬಾಧ್ಯಸ್ಥಿಕೆ

ಪಾಪದ ಕಾರಣದಿಂದ ಮರಣವು ಲೋಕದೊಳಗೆ ಬಂದಿತು (ಆದಿಕಾಂಡ 3:17-19; ರೋಮಾಪುರ 5:12; 1 ಕೊರಿಂಥ 15:22). ಸೈತಾನ ಸುಳ್ಳನ್ನು ಸಾಧಿಸಿದ ಸರ್ಪಕ್ಕೆ ಕಿವಿಗೊಟ್ಟಿದ್ದರಿಂದ ಆದಾಮ ಮತ್ತು ಹವ್ವರಿಗೆ ದೇವರ ಶಿಕ್ಷೆ ಅದಾಗಿತ್ತು (ಯೋಹಾನ 8:44), "ನೀನು ಸಾಯುವದಿಲ್ಲ!" (ಆದಿಕಾಂಡ 3:4). ಅವರು ಪಾಪ ಮಾಡಿದಾಗ ಆತ್ಮಿಕ ಮರಣ ಬಂದಿತು (ರೋಮಾಪುರ 6:23; 1 ತಿಮೊಥೆ 5:6; ಯಾಕೋಬ 1:15), ಮತ್ತು ದೇವರು ಅವರಿಂದ ಜೀವ ವೃಕ್ಷವನ್ನು ತೆಗೆದು ಹಾಕಿದ್ದರಿಂದ ದೈಹಿಕ ಮರಣವು ಪ್ರಾರಂಭವಾಯಿತು (ಆದಿಕಾಂಡ 3:22, 23), "ನೀನು ಮಣ್ಣಿನಿಂದ ತೆಗೆಯಲ್ಪಟ್ಟವನಲ್ಲವೋ, ನೀನು ಮಣ್ಣಿಗೆ ಪುನಃ ಸೇರ ತಕ್ಕವನಾಗಿದ್ದೀ" (ಆದಿಕಾಂಡ 3:19) ಎಂದು ದೇವರು ಆದಾಮಿಗೆ ಹೇಳಿದನು.

ಆದಾಮ ಮತ್ತು ಹವ್ವರಿಗೆ ಅವರು "ನಿಶ್ಚಿತವಾಗಿಯೂ ಸಾಯುವಿರಿ" (ಆದಿಕಾಂಡ 2:17) ಎಂಬ ದೇವರ ವಾಗ್ದಾನವು ಅವರ ಎಲ್ಲಾ ವಂಶಜರಿಗೂ ಸತ್ಯವಾದದ್ದಾಗಿತ್ತು. "ಒಂದೇ ಸಾರಿ ಸಾಯುವುದು ಮನುಷ್ಯರಿಗೆ ನೇಮಕವಾಗಿದೆ" (ಇಬ್ರಿಯ 9:27) ಎಂಬುದಾಗಿ ನಾವು ಓದಿದರೂ, ಈ ಸತ್ಯವನ್ನು ದೈವಿಕ ಮೂಲದಿಂದ ನಮಗೆ ಪ್ರಕಟನೆಯ ಅಗತ್ಯವಿಲ್ಲ, ಮೊದಲನೆಯ ಮರಣದಿಂದ (ಹೆಬೆಲನ ಮರಣ; ಆದಿಕಾಂಡ 4:8) ಇಲ್ಲಿಯ ವರೆಗೆ, ಮರಣವು ಎಲ್ಲವುಗಳ ನಿರೀಕ್ಷಿತ ಅಂತ್ಯವಾಗಿದೆ. ಇದಕ್ಕೆ ವ್ಯತಿರಿಕ್ತವಾದವರು ಹನೋಕ (ಆದಿಕಾಂಡ 5:24; ಇಬ್ರಿಯ 11:5) ಮತ್ತು ಎಲೀಯ (2 ಅರಸುಗಳು 2:11), ಇವರಿಬ್ಬರೂ ಪರಲೋಕಕ್ಕೆ ನೇರವಾಗಿ ತೆಗೆದು ಕೊಂಡು ಹೋಗಲ್ಪಟ್ಟರು.

ನಾವು ಕುತೂಹಲ ಭರಿತರಾದ ಜೀವಿಗಳಾಗಿರುವದರಿಂದ, "ನಾವು ಸಾಯುವಾಗ ಏನು ಸಂಭವಿಸುತ್ತದೆ? ನಮ್ಮ ರಚನೆಯಲ್ಲಿ ದೇಹದ ಮರಣದ ಉಳಿಸಿಕೊಳ್ಳುವಂಥದ್ದು ಏನಾದರೂ ಇರುವುದೋ? ಅದರ ನಂತರ ನಾವು ಯಾವ ರೀತಿಯಲ್ಲಿ ಇರುವೆವು? ಇನ್ನೊಂದು ಕ್ಷೇತ್ರವನ್ನು, ಮರಣದ ಬಾಗಿಲನ್ನು ದಾಟಿ ಇನ್ನೊಂದು ಅಸ್ತಿತ್ವವನ್ನು ನಾವು ಪ್ರವೇಶಿಸುವೆವೋ? ಹಾಗಿದ್ದರೆ, ಆ ಅಸ್ತಿತ್ವವು ಹೇಗಿರುವುದು?" ಎಂದು ಕೇಳುವುದು ಸ್ವಾಭಾವಿಕವಾದದ್ದಾಗಿದೆ.

## ನಮ್ಮ ಮರ್ತ್ಯತೆ

ಅಮರತ್ವವನ್ನು ಹೊಂದಿದ ತಂದೆಯಾದ ದೇವರು, ಕುಮಾರನಾದ ದೇವರು ಹಾಗೂ ಪರಿಶುದ್ಧಾತ್ಮನಾದ ದೇವರು (1 ತಿಮೊಥೆ 6:15, 16; ನೋಡಿರಿ 1:17) ಇವರೊಂದಿಗೆ ವಿರುದ್ಧವಾಗಿ - ನಾವು ಮರ್ತ್ಯರಾಗಿದ್ದೇವೆ ಎಂದು ಬೈಬಲ್ ಬೋಧಿಸುತ್ತದೆ. ಗ್ರೀಕ ಪದ *thnetos*ದಿಂದ ವ್ಯಕ್ತಪಡಿಸಿದಂತೆ ನಮ್ಮ ಮರ್ತ್ಯತ್ವಕ್ಕೆ ಕೆಳಗಿನ ಉಲ್ಲೇಖಗಳನ್ನು ಗಮನಿಸಿರಿ: (1) “ಸಾಯತಕ್ಕ ನಿಮ್ಮ ದೇಹದ ಮೇಲೆ ಪಾಪವನ್ನು ಆಳಗೊಡಿಸ ಬೇಡಿರಿ” (ರೋಮಾಪುರ 6:12); (2) ಕ್ರಿಸ್ತನು, “ನಿಮ್ಮ ಮರ್ತ್ಯ ದೇಹಗಳನ್ನು ಸಹ ಬದುಕಿಸುವನು” (ರೋಮಾಪುರ 8:11); (3) “ಮರಣಾಧೀನವಾಗಿರುವ ಈ ದೇಹವು ಅಮರತ್ವವನ್ನು ಧರಿಸಿಕೊಳ್ಳತಕ್ಕದ್ದು” (1 ಕೊರಿಂಥ 15:53); (4) “ಮರಣಾಧೀನವಾಗಿರುವ ಈ ದೇಹವು ಅಮರತ್ವವನ್ನು ಧರಿಸಿಕೊಂಡಾಗ” (1 ಕೊರಿಂಥ 15:54); (5) “ಮರ್ತ್ಯ ಶರೀರ” (2 ಕೊರಿಂಥ 4:11); ಮತ್ತು (6) “ಮರ್ತ್ಯವಾದದ್ದು ನುಂಗಿಹೋಗಿ ಜೀವವೊಂದೇ ಉಳಿಯುವಂತೆ” (2 ಕೊರಿಂಥ 5:4). “ಮರಣಾಧೀನ” ಎಂಬದು ಈ ಪ್ರತಿಯೊಂದು ಉಲ್ಲೇಖದಲ್ಲಿ ದೇಹಕ್ಕೆ ಅನ್ವಯಿಸುತ್ತದೆ. ಇದು ಮನುಷ್ಯನ ಮಾಂಸಿಕ ಭಾಗವಾಗಿರುತ್ತದೆ. 1 ಕೊರಿಂಥ 15:53, 54ರಲ್ಲಿ ಇದು ಹೇಳಲ್ಪಟ್ಟಿರದಿದ್ದರೂ ಸಂದರ್ಭಕ್ಕನುಗುಣವಾಗಿ ಅವನು “ಮರಣಾಧೀನ” ಮತ್ತು “ನಾಶವಾಗಿ ಹೋಗುವಂಥದ್ದು” ಎಂದು ಉಲ್ಲೇಖಿಸಿದ್ದು ದೇಹವಾಗಿದೆ. “ದೇಹವು ಲಯಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ನಿರ್ಲಯಾವಸ್ಥೆಯಲ್ಲಿ ಎದ್ದು ಬರುವುದು” (1 ಕೊರಿಂಥ 15:42ಬಿ) ಎಂದು ಅವನು ಮೊದಲು ಹೇಳಿದ್ದನು. “ಪ್ರಾಕೃತ ದೇಹವಾಗಿ ಬಿತ್ತಲ್ಪಡುತ್ತದೆ, ಆತ್ಮಿಕ ದೇಹವಾಗಿ ಎದ್ದು ಬರುವದು” (1 ಕೊರಿಂಥ 15:44ಎ) ಎಂದೂ ಹೇಳಿದ್ದನು.

ಪುನರುತ್ಥಾನ ಹೊಂದಿದ ನಮ್ಮ ದೇಹಗಳು ಅಮರತ್ವವುಳ್ಳವುಗಳಾಗಿರುವವು (1 ಕೊರಿಂಥ 15:53, 54), ಅವು ಈಗಿನ ಪರಿಸ್ಥಿತಿಯಲ್ಲಿ ಮೃತಪ್ರಾಯದವುಗಳಾಗಿರುವವು ಎಂಬುದನ್ನು ಸೂಚಿಸುತ್ತವೆ. ಮೃತಪ್ರಾಯವಾದದ್ದೆಂದು ಬೈಬಲು ಕರೆಯುವಂಥದ್ದು ನಮ್ಮ ಇಂದಿನ ದೇಹಗಳಾಗಿವೆ, ನಮ್ಮ ಆಂತರಿಕ ಜೀವಗಳಲ್ಲ.

## ನಮ್ಮ ರಚನೆ

ನಮ್ಮ ರಚನೆಯ ಕಡೆಗಿರುವ ನಮ್ಮ ಮನೋಭಾವನೆಗಳು ಸಾಮಾನ್ಯವಾಗಿ ನಾವು ಸಾಯುವಾಗ ಏನು ಸಂಭವಿಸುವುದು ಎಂಬುದರ ಬಗ್ಗೆ ನಮ್ಮ ತೀರ್ಮಾನಗಳ ಮೇಲೆ ಪ್ರಭಾವಬೀರುವವು, ನಮ್ಮ ದೇಹಗಳು ನಾವಿರುವಂಥ ಎಲ್ಲವೂ ಆಗಿದೆಯೆಂದು ನಂಬಿದರೆ, ಕನಿಷ್ಠಪಕ್ಷ ಸಮಯದಲ್ಲಿಯ ಆ ಹಂತದಲ್ಲಿ, ಮರಣವು ನಮ್ಮ ಅಸ್ತಿತ್ವದ ಅಂತ್ಯವಾಗಿದೆಯೆಂದು ನಾವು ನಂಬಬಹುದು. ಇನ್ನೊಂದೆಡೆಯಲ್ಲಿ ನಮ್ಮ ದೇಹಗಳು ನಮ್ಮ ರಚನೆಯ ಒಂದು ಭಾಗ ಮಾತ್ರ ಆಗಿದೆಯೆಂದುನಾವು ನಂಬಿದರೆ, ನಮ್ಮ ದೇಹಗಳು ಸತ್ತು ಹೋದ ನಂತರವೂ ಯಾವುದೋ ರೂಪದಲ್ಲಿ ನಾವು ಅಸ್ತಿತ್ವದಲ್ಲಿ ಮುಂದುವರಿಯುವೆವೆಂದು ನಂಬುವೆವು.

ನಾವಿರುವ ರೀತಿಯಲ್ಲಿಯೇ ದೇವರು ಇರುವನು: “ಮತ್ತು ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟು ಮಾಡಿದನು, ...” (ಆದಿಕಾಂಡ 1:27). ನಾವು ಕೇವಲ ದೇಹವಾಗಿದ್ದರೆ ಮತ್ತು ಆ ದೇಹವು ದೇವರ ಸ್ವರೂಪದಲ್ಲಿ ಮಾಡಲ್ಪಟ್ಟಿದ್ದರೆ ಆಗ ಒಂದು ರೀತಿಯಲ್ಲಿ ದೈಹಿಕವಾಗಿ ದೇವರನ್ನು ಹೋಲುತಿದ್ದು, ಇದು ಹಾಗಿದ್ದರೆ, ದೇವರು

ಸ್ತ್ರೀಯಂತೆ ಇಲ್ಲವೇ ಪುರುಷನಂತೆ ಇರುವನೋ? ದೇವರು, ಆತ್ಮವಾಗಿದ್ದಾತನು (ಯೋಹಾನ 4:24), ಬಾಯಿ, ಹಲ್ಲು, ಹೊಟ್ಟೆ, ಕಾಲುಗಳು ಮತ್ತು ಈ ಲೋಕದಲ್ಲಿ ನಾವು ಜೀವಿಸಿರಲಿಕ್ಕೆ ಅಗತ್ಯವಾದ ಅದೇ ಭೌತಿಕ ದೇಹವುಳ್ಳವನಾಗಿರಬೇಕಿತ್ತೋ?


ಪೌಲನು ದೇಹವನ್ನು ಕುರಿತು ಹೀಗೆ ಬರೆದಿದ್ದಾನೆ, "ಮಣ್ಣಿನಿಂದ ಹುಟ್ಟಿದವನ ಸಾರೂಪ್ಯವನ್ನು ಧರಿಸಿಕೊಳ್ಳಬೇಕು" (1 ಕೊರಿಂಥ 15:49). ಈಗ ನಮಗೆ ದೇಹ ಗಳಿಗೆ ಮಣ್ಣಿನಿಂದ ಹುಟ್ಟಿದವನ ಸಾರೂಪ್ಯವಿದ್ದರೆ, ಅನಂತರದಲ್ಲಿ ಪರಲೋಕ ದಿಂದಾತನ ಸಾರೂಪ್ಯವಿದ್ದರೆ, ಅವುಗಳಿಗೆ ಈಗ ಪರಲೋಕದಿಂದ ಬರುವಾತನ ಸಾರೂಪ್ಯವಿರುವದಿಲ್ಲ. ನಾವು ಎಬ್ಬಿಸಲ್ಪಡುವಾಗ ನಮಗೆ ಪರಲೋಕದಿಂದ ಬಂದಾತನ ಸ್ವರೂಪವಿರುವುದು. ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟು ಮಾಡಿದಾಗ, ದೇಹವು ದೇವರ ಸ್ವರೂಪದಲ್ಲಿ ಸೃಷ್ಟಿದ್ದಾಗಿರಲಿಲ್ಲ; ಇಲ್ಲದಿದ್ದರೆ ನಾವು ಆಗಲೇ, "ಪರಲೋಕದಿಂದ ಬಂದಾತನ ಸ್ವರೂಪವನ್ನು ಧರಿಸಿರುತ್ತಿದ್ದೆವು" ದೇವರು ಆತ್ಮನಾಗಿದ್ದುದರಿಂದ, ಮನುಷ್ಯನ ಆತ್ಮವು ದೇವರ ಸ್ವರೂಪವನ್ನು ಧರಿಸಿದ್ದಾಗಿರ ಬೇಕಿತ್ತು. ತನ್ನ ಸೃಷ್ಟಿಕರ್ತನ ಸ್ವರೂಪವನ್ನು ಧರಿಸಿರುವ ಆತ್ಮವು ಪ್ರತಿಯೊಬ್ಬ ವ್ಯಕ್ತಿಗೆ ಇರಬೇಕೆಂದು ಇದು ಸೂಚಿಸುತ್ತದೆ.

ಪೌಲನು ನಮ್ಮನ್ನು ದೇಹ, ಪ್ರಾಣ ಮತ್ತು ಆತ್ಮ ಎಂದು ವಿವರಿಸಿದ್ದಾನೆ (1 ಥೆಸಲೊನೀಕ 5:23). ದೇವರ ವಾಕ್ಯವು ಪ್ರಾಣವನ್ನೂ ಆತ್ಮವನ್ನೂ, ಕೀಲುಮಜ್ಜೆಗಳನ್ನು ವಿಭಾಗಿಸಲು ಶಕ್ತಿಯುಳ್ಳದ್ದಾಗಿದೆ (ಇಬ್ರಿಯ 4:12). ಇವು ವಿಭಾಗಿಸಲ್ಪಡ ಬಹುದಾದರೆ, ಆಗ ಅವು ಒಂದೇಯಾಗಿರುವಂಥವುಗಳು ಆಗಿರಲಿಕ್ಕಿಲ್ಲ.

ಈ ಕಾರಣದಿಂದ, ನಾವು ಮೂರು ಭಾಗಗಳಿಂದ ಮಾಡಲ್ಪಟ್ಟ "trichotomous," ಆಗಿದ್ದೇವೆಂದು ತೀರ್ಮಾನಿಸಿಕೊಳ್ಳತಕ್ಕದ್ದು. ಅದೇ ರೀತಿಯಲ್ಲಿ ತಂದೆ, ಕುಮಾರ, ಪರಿಶುದ್ಧಾತ್ಮನಂತೆ (ಮತ್ತಾಯ 28:19) ಒಬ್ಬನೇ ದೇವರಾಗಿದ್ದಾನೆ (1 ಯೋಹಾನ 10:30), ಎಲ್ಲಾ ಮೂರೂ - ದೇಹ, ಪ್ರಾಣ ಮತ್ತು ಆತ್ಮ - ಒಂದು ಜೀವಿಯ, ಒಬ್ಬನ ಇಡೀ ರಚನೆಯು ಆಗಿರುತ್ತದೆ.

ಕೆಲವು ಸಮಯಗಳಲ್ಲಿ ಪ್ರಾಣ ಮತ್ತು ಆತ್ಮನ ಮಧ್ಯದಲ್ಲಿ ಭಿನ್ನತೆ ಮಾಡುವುದು ಕಷ್ಟವಾಗುತ್ತದೆ. ಹಾಗಿದ್ದರೂ, ಇದು ಭಿನ್ನತೆಯು ಅಸ್ತಿತ್ವದಲ್ಲಿ ಇರುವದಲ್ಲಿ ಎಂದರ್ಥ ವಾಗುವದಿಲ್ಲ. ನಮ್ಮ ದೇಹಗಳಲ್ಲಿ ವಾಸಿಸುವ ಆತ್ಮವಿರುವದಿಲ್ಲ, ಆದರೆ "ಪ್ರಾಣವು" ಸಂಪೂರ್ಣ ವ್ಯಕ್ತಿ - ಉಸಿರು ಇಲ್ಲವೇ ಜೀವ ಶಕ್ತಿ ಮತ್ತು ದೇಹ ಎರಡನ್ನು ಒಳಗೊಂಡಿರುತ್ತದೆಂದು ಕೆಲವರು ತೀರ್ಮಾನಿಸಿದ್ದಾರೆ.

ವಿಷಯವು, "soul" ಎಂದು ಭಾಷಾಂತರಿಸಲ್ಪಟ್ಟ ಪದಗಳು ಸಾಮಾನ್ಯವಾಗಿ ಜೀವಕ್ಕೆ ಇಲ್ಲವೇ ಜೀವಿಸುವಂಥದ್ದಕ್ಕೆ ಸಂಬಂಧಸಿದ್ದರಿಂದ ಕೆಡಿಸಲ್ಪಟ್ಟಿದೆ. ಜೀವಿಸುವಂಥದ್ದು ಪ್ರಾಣಿಗಳನ್ನು ("ಸಜೀವ ಜೀವಿಗಳು"; ಆದಿಕಾಂಡ 1:20, 21, 24), ಮನುಷ್ಯನನ್ನು ("ಜೀವಿಸುವ ಜೀವಿ"; ಆದಿಕಾಂಡ 2:7), ಮತ್ತು ಆಂತರಿಕ ವ್ಯಕ್ತಿ ("ನನ್ನ ಆತ್ಮ," "ಆಕೆಯ ಆತ್ಮ," "ಅವನ ಆತ್ಮ"; ಆದಿಕಾಂಡ 27:4; 35:18; ಯಾಜಕಕಾಂಡ 16:29; ಲೂಕ 12:20; ನ್ಯಾಯಸ್ಥಾಪಕರು 16:16), ಒಳಗೊಂಡಿರುತ್ತದೆ. ಇನ್ನೊಂದು ತೊಂದರೆಯು "ಪ್ರಾಣ" ಎಂಬುದಕ್ಕೆ ಕಾಣದ ಒತ್ತಡ, ಅದು ಗಾಳಿ, ಆತ್ಮ ಇಲ್ಲವೇ ಶ್ವಾಸ ಎಂದು ಅರ್ಥವಾಗುವದರಿಂದ ಉದ್ಭವಿಸುತ್ತದೆ.




*ಮಾನವನ ಮೂರು ಭಾಗಗಳ ರಚನೆ*

**ದೇಹ**

ದೇಹವು ನಮ್ಮ ರಚನೆಯ ಲಯವಾಗುವಂಥ ಭಾಗವಾಗಿದ್ದು "ಮರ್ತ್ಯ ದೇಹ" (ರೋಮಾಪುರ 6:12), "ಲಯವಾಗುವ ಶರೀರ" (2 ಕೊರಿಂಥ 4:11), "ಹೊರಗಣ ಮನುಷ್ಯ" (2 ಕೊರಿಂಥ 4:16) ಮತ್ತು "ಭೂಮಿಯ ಮೇಲಿರುವ ನಮ್ಮ ಮನೆ" (2 ಕೊರಿಂಥ 5:1) ಎಂದು ಹೇಳಲ್ಪಟ್ಟಿದೆ.

ನಮ್ಮ ದೇಹಗಳು ನಾವು ಜೀವಿಸುತ್ತಿರುವ ಶರೀರದ ಭೂಲೋಕದ ಮನೆಗಳಾಗಿದೆ. ಅವುಗಳ ಮುಖಾಂತರ ನಮಗೆ ದೈಹಿಕ ಅಸ್ತಿತ್ವವಿರುತ್ತದೆ.

**ಪ್ರಾಣ**

ಹಿಬ್ರೂ ಪದ *nephesh* ಮತ್ತು ಗ್ರೀಕ ಪದ *psuche* ಇವು "ಪ್ರಾಣ" ಎಂದು ಭಾಷಾಂತರಿಸಲ್ಪಟ್ಟಿದ್ದು ವಿವಿಧ ಅರ್ಥಗಳನ್ನು ಒಳಗೊಂಡಿರುತ್ತವೆ. ಅವು ಹೇಗೆ ಭಾಷಾಂತರಿಸಲ್ಪಡಬೇಕೆಂದು ಹಿನ್ನೆಲೆಯು ಮಾತ್ರವೇ ತೀರ್ಮಾನಿಸಬಹುದು. KJVಯು *nephesh* ಎಂಬುದನ್ನು ಇಪ್ಪತ್ತೊಂಭತ್ತು ಭಿನ್ನವಾದ ರೀತಿಯಲ್ಲಿ ಭಾಷಾಂತರಿಸಿದೆ. *nephesh* ಗ್ರೀಕ ಸಮಾಂತರ ಪದ *psuche* ಎಂಬುದು ಸಹ KJVಯಲ್ಲಿ ವಿವಿಧ ರೀತಿ ಗಳಲ್ಲಿ ಭಾಷಾಂತರಿಸಲ್ಪಟ್ಟಿದೆ.

"Soul" ಎಂದು ಭಾಷಾಂತರಿಸಲ್ಪಟ್ಟ ಮಾತುಗಳು ಇಡೀ ವ್ಯಕ್ತಿಯಂತೆ, ನಿರ್ದಿಷ್ಟವಾದ ಸಂಗತಿಯ ಬಗ್ಗೆ ಉಪಯೋಗಿಸಲ್ಪಟ್ಟಿವೆ (1 ಪೇತ್ರ 3:20). ಅದೇ ಮಾತುಗಳು ಜೀವಕ್ಕೆ ಸಂಬಂಧಿಸಬಹುದು (ಮತ್ತಾಯ 2:20; 6:25). ಇಲ್ಲವೇ ಆಂತರಿಕ ವ್ಯಕ್ತಿಗೆ (ಮತ್ತಾಯ 10:28), ಅದರ ಆತ್ಮಿಕ ಕಾರ್ಯಗಳೊಂದಿಗೆ - ಭಾವನೆಗಳನ್ನೊಳಗೊಂಡು (ಮಾರ್ಕ 14:34; ಯೋಹಾನ 12:27), ಉದ್ದೇಶಕ್ಕೆ (ಲೂಕ 12:19), ಮತ್ತು ಆರಾಧನೆಗೆ (ಲೂಕ 1:46) ಸಂಬಂಧಿಸಬಹುದು. ದೇವರು ತನ್ನ ಆತ್ಮಕ್ಕೆ ಸಂಬಂಧಿಸುತ್ತಾನೆ (ಮತ್ತಾಯ 12:18; ಇಬ್ರಿಯ 10:38).

**ಆತ್ಮ**

ಬೈಬಲಿನಲಿ *ruach* ಎಂಬ ಹಿಬ್ರೂ ಪದ ಮತ್ತು *pneuma* ಎಂಬ ಗ್ರೀಕ ಪದವು ಬಹಳ ಸಲ "ಆತ್ಮ" ಎಂದು ಭಾಷಾಂತರಿಸಲ್ಪಟ್ಟಿದೆ, ಭೌತಿಕ (or) ದೈಹಿಕ ವಲ್ಲದ್ದಕ್ಕೆ ಗಾಳಿ (ಆದಿಕಾಂಡ 8:1; ಯೋಹಾನ 3:8), ಉಸಿರು (ಆದಿಕಾಂಡ 6:17), ಆತ್ಮ ಜೀವಿ ಗಳು (ಜೆಕರ್ಯ 6:5; ಯೋಹಾನ 4:24; ಇಬ್ರಿಯ 1:14), ಆಂತರಿಕ ಗುಣಗಳು (ಧಿಮೋ ಚನಕಾಂಡ 28:3; 1 ಕೊರಿಂಥ 4:21), ಇಲ್ಲವೇ ಮಾನವ ಆತ್ಮಗಳು (ಆದಿಕಾಂಡ 45:27; 1 ಕೊರಿಂಥ 2:11) ಇವುಗಳಿಗೆ ಸಂಬಂಧಿಸಿರುತ್ತದೆ.

ಆತ್ಮವು ಪ್ರಾಣಕ್ಕಿಂತ ಭಿನ್ನವಾಗಿರುತ್ತದೆ. "ಆತ್ಮ" ಎಂಬ ಮಾತು ಸಂಪೂರ್ಣ ವ್ಯಕ್ತಿಗೆ (ದೇಹ ಮತ್ತು ಆತ್ಮವನ್ನು ಒಳಗೊಂಡು), ಜೀವಕ್ಕೆ, ಇಲ್ಲವೇ ಆಂತರಿಕ ಜೀವಿಗೆ (ಹೊರಗಿನ ಮನುಷ್ಯ, ದೇಹಕ್ಕೆ ವಿರುದ್ಧವಾಗಿ; 2 ಕೊರಿಂಥ 4:16) ಸಂಬಂಧಿಸಿರುತ್ತದೆ. ಆತ್ಮವು, ಭೌತಿಕ ದೇಹದಿಂದ ಪ್ರತ್ಯೇಕವಾಗಿ ಭಿನ್ನವಾಗಿರುವ ವ್ಯಕ್ತಿಯ ಆ ಭಾಗವು ದೇವರ ದೈಹಿಕವಲ್ಲದ ರಚನೆಯಂತಿರುವ ನಮ್ಮ ಭಾಗವಾಗಿರುತ್ತದೆ (ಯೋಹಾನ 4:24). ನಾವು ಗರ್ಭದಲ್ಲಿ ಉತ್ಪತ್ತಿಯಾದಾಗ ದೇವರಿಂದ ನಮಗೆ ಕೊಡಲ್ಪಟ್ಟಿದೆ (ಪ್ರಸಂಗಿ 12:7; ಜೆಕರ್ಯ 12:1; ಇಬ್ರಿಯ 12:9).

ನಮ್ಮ ದೇಹಗಳು ಪ್ರಾಕೃತಿಕ, ಇಂದಿನ ಭೂಲೋಕದ ಸ್ಥಿತಿಯೊಂದಿಗೆ ನಮ್ಮ ಗುರಿತಿಸುವಿಕೆಯಾಗಿರುವ ನಮ್ಮ ಭಾಗವಾಗಿವೆ. "ಆತ್ಮವು" ಸಾಮಾನ್ಯವಾಗಿ ದೇಹದಲ್ಲಿ ವಾಸಿಸುವ ವ್ಯಕ್ತಿ ಎಂದು ಅರ್ಥವಾಗುತ್ತದೆ: "ನೀನು" ಇಲ್ಲವೆ "ನಾನು." ನಾವು ದೇಹದಲ್ಲಿರುವಾಗ, ನಮ್ಮ ದೇಹಗಳು ಭೂಲೋಕದ ಮನೆಗಳಾಗಿವೆ. ಪ್ರತಿಯೊಂದು ಜೀವಿಸುವ ಪ್ರಾಣಕ್ಕೆ ದೇಹವಿದೆ, ದೈಹಿಕ ಭಾಗವಿದೆ, ಮತ್ತು ಮಾನವ ರಚನೆಯ ದೇವರ ಸ್ವರೂಪದ ಭಾಗ, ದೈಹಿಕವಲ್ಲದ, ಅದೃಶ್ಯವಾದ ಆತ್ಮವಿದೆ. ದೇಹಕ್ಕೆ ಮಾತ್ರವೇ ಸಂಬಂಧಿಸಿದರೆ, ನಾವು ಪ್ರಾಣದ ಮತ್ತು ಆತ್ಮದ ಬಗ್ಗೆ ಮಾತಾಡುತ್ತಿರುವದಿಲ್ಲ. ನಾವು ಆತ್ಮಕ್ಕೆ ಸಂಬಂಧಿಸಿದರೆ ನಾವು ದೇಹದ ಬಗ್ಗೆ ಮಾತಾಡುತ್ತಿರುವದಿಲ್ಲ. ನಾವು ಆತ್ಮಕ್ಕೆ ಸಂಬಂಧಿಸಿದರೆ, ಸಂಪೂರ್ಣ "ನೀನು" ಮತ್ತು "ನಾನು" - ದೇಹಗಲ್ಲಿ ವಾಸಿಸುವ ಆಂತರ್ಯದ ವ್ಯಕ್ತಿಗೆ ಎಂದರ್ಥವಾಗುತ್ತದೆ ( 2 ಕೊರಿಂಥ 4:16). ಪ್ರತಿಯೊಬ್ಬ ವ್ಯಕ್ತಿಗೆ ದೇಹವಿದೆ, ಆದರೆ ನಾವು ಕೇವಲ ದೇಹಗಳಲ್ಲ. ನಮ್ಮಲ್ಲಿ ಪ್ರತಿಯೊಬ್ಬರಿಗೆ, ಪ್ರಾಣವಿದೆ, ಆದರೆ ನಾವು ಪ್ರಾಣಗಳಿಗಿಂತ ಹೆಚ್ಚಿನವರಾಗಿದ್ದೇವೆ. ನಾವು ಆತ್ಮಗಳು, ಜೀವಿಸುವ ಅಸ್ತಿತ್ವವುಳ್ಳವರು ಎಂದು ಇಲ್ಲವೇ ಆತ್ಮಗಳುಳ್ಳವರು, ಪ್ರಾಕೃತ ದೇಹಗಳೊಳಗೆ ಜೀವಿ ಸುವ ಅಸ್ತಿತ್ವವುಳ್ಳವರು ಎಂದು ಕರೆಯಲ್ಪಡಬಹುದು.

## ಮುಕ್ತಾಯ

ಮಾನವ ರಚನೆಯು ಮೂರು ಭಾಗಗಳನ್ನು ಒಳಗೊಂಡಿರುತ್ತದೆ: ದೇಹ, ಪ್ರಾಣ ಮತ್ತು ಆತ್ಮ. ಈ ಕಾರಣದಿಂದ ದೇಹದ ಮರಣವು ನಮ್ಮಲ್ಲಿ ಪ್ರತಿಯೊಬ್ಬರಲ್ಲಿರುವ ಪ್ರಾಣ ಮತ್ತು ಆತ್ಮದ ಮರಣವಾಗಿರುವದಿಲ್ಲ. ಮರಣದಲ್ಲಿ ನಮ್ಮ ದೈಹಿಕ ಚಟುವಟಿಕೆಗಳು ನಿಂತು ಹೋಗುತ್ತವೆ, ಆದರೆ ಪ್ರಾಣ ಮತ್ತು ಆತ್ಮ ದೇಹದ ಹೊರಗೆ ಅಸ್ತಿತ್ವತಲ್ಲಿರುತ್ತದೆ.

## KJVಯಲ್ಲಿ *NEPHESH* ಮತ್ತು *PSUCHE*ಯ ಹಲವಾರು ಭಾಷಾಂತರಗಳು

| *ಮೂಲ* | *ಭಾಷಾಂತರ* | *ಉಪಯೋಗಿಸಲ್ಪಟ್ಟ ಸಂಖ್ಯೆ* | *ಉದಾಹರಣೆ* |
|---|---|---|---|
| 1. *nephesh* (ಹೀಬ್ರೂ) | "ಪ್ರಾಣ" | 428 | ಆದಿಕಾಂಡ 2:7 |
| | "ಜೀವ" | 116 | ಆದಿಕಾಂಡ 9:4 |
| | "ಮನಸ್ಸು" | 15 | ಆದಿಕಾಂಡ 23:8 |
| | "ಹೃದಯ' | 15 | ವಿಮೋಚನಕಾಂಡ 23:9 |
| | "ವ್ಯಕ್ತಿ" | 30 | ಆದಿಕಾಂಡ 14:21 |
| | "ತಾನು" | 19 | ಯಾಜಕಕಾಂಡ 11:43 |
| | "ಜೀವಿ" | 9 | ಆದಿಕಾಂಡ 1:21 |
| | "ದೇಹ" | 7 | ಯಾಜಕಕಾಂಡ 21:11 |
| | "ಆಶೆ" | 5 | ಪ್ರಸಂಗಿ 6:9 |
| | "ಇಷ್ಟಾನುಸಾರ" | 4 | ಧರ್ಮೋಪದೇಶಕಾಂಡ 23:24 |
| | "ಚಿತ್ತ" | 4 | ಕೀರ್ತನೆ 27:12 |
| | "ಕೋರಿಕೆ" | 2 | ವಿಮೋಚನಕಾಂಡ 15:9 |
| 2. *psuche* (ಗ್ರೀಕ) | "ಪ್ರಾಣ" | 58 | ಮತ್ತಾಯ 10:28 |
| | "ಜೀವ" | 40 | ಮತ್ತಾಯ 2:20 |
| | "ಮನಸ್ಸು" | 3 | ಅಪೊಸ್ತಲರ ಕೃತ್ಯ 14:2 |
| | "ಹೃದಯ" | 1 | ಎಫೆಸ 6:6 |

© 2009 Truth for Today